# ಸಿದ್ದಿಕಿ ಫುಲ್‌ಖುಷ್!



ಬಾಲಿವುಡ್‌ನ ಬಹು ಜನಪ್ರಿಯ ತಾರೆಯರ ಪಟ್ಟಿಯಲ್ಲಿ ನಿಸ್ಸಂಶಯವಾಗಿ ಕಾಣಿಸುವ ಹೆಸರು ನವಾಜುದ್ದೀನ್ ಸಿದ್ದಿಕಿ ಅವರದು. ತಾರೆಯಾಗಲು ನಾಯಕನಟನೇ ಆಗಬೇಕೆಂದಿಲ್ಲ ಎಂಬುದನ್ನು ಸಾಬೀತುಪಡಿಸಿದವರು ಸಿದ್ದಿಕಿ. ಬಾಲಿವುಡ್‌ನ 'ಟಿಪಿಕಲ್ ಹೀರೊ' ಇಮೇಜ್‌ಗೆ ಹೊಂದಿಕೊಳ್ಳದ ವಿಶಿಷ್ಟ ಹೀರೊ. ಚಿತ್ರರಂಗಕ್ಕೆ ಕಾಲಿಡುವಾಗ ಈ ಹೀರೊಗಳ ನಡುವೆ ಒಬ್ಬನೆನಿಸಿಕೊಳ್ಳುವ ಬಯಕೆ ಇರಲಿಲ್ಲವಂತೆ. ಅವರಲ್ಲಿ ಇದ್ದದ್ದು ಒಳ್ಳೆಯ ನಟ ಎಂದು ಗುರುತಿಸಿಕೊಳ್ಳುವ ಏಕೈಕ ಗುರಿ.

42ರ ಹರೆಯದ ಸಿದ್ದಿಕಿ ವೃತ್ತಿ ಬದುಕು ಆರಂಭಿಸಿದ್ದು, 'ಸರ್ಫರೋಜ್', 'ಮುನ್ನಾಭಾಯಿ ಎಂಬಿಬಿಎಸ್'ನಂತಹ ಚಿತ್ರಗಳಲ್ಲಿನ ಸಣ್ಣಪುಟ್ಟ ಪಾತ್ರಗಳ ಮೂಲಕ. 'ಬ್ಲ್ಯಾಕ್ ಫ್ರೈಡೇ', 'ಕಹಾನಿ', 'ಗ್ಯಾಂಗ್ಸ್ ಆಫ್ ವಸ್ಸೆಪುರ್' ಚಿತ್ರಗಳು ಜನಪ್ರಿಯತೆ ತಂದುಕೊಟ್ಟವು. ಪಾತ್ರಗಳು ಚಿಕ್ಕದಾದರೂ ಸಿದ್ದಿಕಿ ಅಭಿನಯ ಅವರೊಬ್ಬ ಅಸಾಮಾನ್ಯ ಪ್ರತಿಭೆ ಎಂಬುದನ್ನು ಪದೇ ಪದೇ ಸಾಬೀತುಪಡಿಸಿದ್ದವು. ಆಗಿನ ಕಠಿಣ ಪರಿಶ್ರಮಕ್ಕೆ ಈಗ ಪ್ರತಿಫಲ ದೊರಕುತ್ತಿದೆ. ತಾವು ಯಾವಾಗಲೂ ಬಯಸುತ್ತಿದ್ದ ಪಾತ್ರಗಳು ಕೊನೆಗೂ ಸಿಗುತ್ತಿವೆ ಎಂಬ ನೆಮ್ಮದಿ ಅವರಲ್ಲಿ ಮೂಡಿದೆ.

'ಪ್ರತಿಯೊಬ್ಬರೂ ಏರಿಳಿತಗಳನ್ನು ಎದುರಿಸಲೇಬೇಕು. ಅದು ಬದುಕಿನ ಭಾಗ. ನನ್ನ ಬದುಕಿನಲ್ಲೂ ಸಾಕಷ್ಟು ಏರಿಳಿತಗಳನ್ನು ಕಂಡಿದ್ದೇನೆ. ಆದರೆ ನನ್ನ ಆಯ್ಕೆಗೆ ತಕ್ಕಂತಹ ಪಾತ್ರಗಳಲ್ಲಿ ನಟಿಸುವ ಅವಕಾಶ ಈಗ ಸಿಗುತ್ತಿವೆ. ಹಿಂದೆಂದಿಗಿಂತ ಖುಷಿಯಾಗಿದ್ದೇನೆ' ಎಂದಿದ್ದಾರೆ.

'ನಾನು ಬಾಲಿವುಡ್‌ನ ಟಿಪಿಕಲ್ ಹೀರೊ ಆಗಬೇಕೆಂದು ಎಂದಿಗೂ ಬಯಸಿದವನಲ್ಲ. ಇಲ್ಲಿ ನಟನಾಗಿ ನನ್ನ ಗುರುತು ಮೂಡಿಸಲು ಬಯಸಿದ್ದೆ. ಈಗ ನನ್ನಂತಹ ನಟನಿಗಾಗಿಯೇ ಪಾತ್ರಗಳನ್ನು ಬರೆಯುತ್ತಿರುವ ಬಾಲಿವುಡ್‌ಗೆ ಧನ್ಯವಾದ. ಕಮರ್ಷಿಯಲ್ ಚಿತ್ರಗಳೂ ನನ್ನಂತಹ ಕಲಾವಿದನಿಗೆ ಪಾತ್ರಗಳನ್ನು ನೀಡುತ್ತಿವೆ. ಇದಕ್ಕಿಂತ ಇನ್ನೇನು ಕೇಳಲು ಸಾಧ್ಯ' ಎಂದಿದ್ದಾರೆ ಸಿದ್ದಿಕಿ.



## ಶ್ರುತಿ: ಓಡಾಟದ ಮಜ

ದಕ್ಷಿಣದ ಚಿತ್ರಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಾ, ಆಗಾಗ ಬಿಟೌನ್‌ನ ವಿಮಾನ ಏರುವ ಶ್ರುತಿ ಹಾಸನ್‌ಗೆ ಎರಡು ಚಿತ್ರರಂಗಗಳ ನಡುವಣ ಓಡಾಟ ಮಜ ನೀಡುತ್ತಿದೆಯಂತೆ. ಶ್ರುತಿ ಚಿತ್ರರಂಗಕ್ಕೆ ಬಂದು ಒಂಬತ್ತು ವರ್ಷಗಳೇ ಕಳೆದಿದೆ. ಆಕೆಯ ಪಾಲಿಗೆ ಬಿಟೌನ್ ಮತ್ತು ದಕ್ಷಿಣದ ಚಿತ್ರರಂಗ ಎರಡೂ ಒಂದೇ ರೀತಿಯ ಉತ್ಸಾಹದ ಚಿಲುಮೆಗಳಾಗಿವೆ. ದಕ್ಷಿಣದಲ್ಲಿ ನಟಿಸುವುದು, ಪ್ಯಾಕ್ ಮಾಡುವುದು ಉತ್ತರ ದಿಕ್ಕಿಗೆ ಹಾರುವುದು. ಅಲ್ಲಿಂದ ಮತ್ತೆ ಇಲ್ಲಿಗೆ. 'ಇದೊಂಥರ ಹುಚ್ಚುತನ. ಅದನ್ನು ಇಷ್ಟಪಡುತ್ತೇನೆ ಕೂಡ. ನಾನು ಬಹುಸಂಸ್ಕೃತಿಯ ಕುಟುಂಬದಲ್ಲಿ ಬೆಳೆದವಳು. ಅದು ನನ್ನ ಅದೃಷ್ಟ. ಈ ಕಾರಣದಿಂದಲೇ ಎರಡೂ ಉದ್ಯಮಗಳ ನಡುವಣ ವ್ಯತ್ಯಾಸ ಕಾಡುವುದಿಲ್ಲ' ಎನ್ನುವುದು ಆಕೆ ನೀಡುವ ವಿವರಣೆ.

ಸ್ಟಾರ್ ನಟರ ಜತೆ ಕಾಣಿಸಿಕೊಳ್ಳುವುದರ ಜತೆಗೆ, ಅಷ್ಟೇನೂ ತಾರಾಪಟ್ಟ ಪಡೆದುಕೊಳ್ಳದ ನಟರೊಂದಿಗೂ ತೆರೆ ಹಂಚಿಕೊಳ್ಳಲು ಆಕೆ ಹಿಂದೇಟು ಹಾಕುತ್ತಿಲ್ಲ. ಜೋಡಿ ಎನಿಸಿಕೊಳ್ಳದ ಸಹನಟರ ಜತೆ ನಟಿಸುವುದರತ್ತಲೇ ಹೆಚ್ಚು ಒಲವು ಹೊಂದಿರುವುದಾಗಿ ಆಕೆ ಹೇಳಿಕೊಂಡಿದ್ದಾಳೆ.

ಆಕೆ ರಾಜ್‌ಕುಮಾರ್ ರಾವ್ ಜತೆ ನಟಿಸಿರುವ 'ಬೆಹೆನ್ ಹೋಗಿ ತೇರಿ' ತೆರೆ ಕಾಣಲು ಸಿದ್ಧವಾಗಿದೆ. 'ತಾರೆಯರಲ್ಲದ ನಟರೊಂದಿಗೆ ತೆರೆ ಹಂಚಿಕೊಳ್ಳುವ ಅನಿರೀಕ್ಷಿತ ಜೋಡಿಯಾಗುವಿಕೆಯೇ ಚೆಂದ' ಎನ್ನುತ್ತಾಳೆ ಶ್ರುತಿ. ಜನಪ್ರಿಯ ಜೋಡಿಗಳಾದರೆ ಎಲ್ಲವೂ ಒಂದೇ ರೀತಿ ಸಾಗುತ್ತದೆ. ಪ್ರೇಕ್ಷಕರೂ ಅವರನ್ನು ಹೀಗೆಯೇ ನೋಡಬೇಕು ಎಂದು ಮಾನಸಿಕವಾಗಿ ಸಿದ್ಧರಾಗಿ ಬಿಡುತ್ತಾರೆ. ಈ ನಿರೀಕ್ಷೆಗಳನ್ನು ಮುರಿದು ಪ್ರೇಕ್ಷಕರಲ್ಲಿ ಅಚ್ಚರಿ ಮೂಡಿಸುವುದನ್ನು ಎಂಜಾಯ್ ಮಾಡುತ್ತೇನೆ ಎಂದಿದ್ದಾಳೆ ಶ್ರುತಿ.